**ಸಿ. ಸಿ. ನಂ. 8749/2024**

**ಪಿ ಡಬ್ಲ್ಯೂ: 1**

**ಸಾಕ್ಷಿಯು ದಿನಾಂಕಃ** 03-02-2026 **ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು**.

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಕೆ.ಎಸ್.ಎಂ ವಕೀಲರಿಂದ</u>**

ಪಿರ್ಯಾದುದಾರರು ನನ್ನ ಅಕ್ಕ. ಸದರಿಯವರು ಸರಕಾರಿ ಪೌಢ ಶಾಲೆಯಲ್ಲಿ ಶಿಕ್ಷಕರಿರುತ್ತಾರೆ. ನನ್ನ ಅಕ್ಕ ಹೊಸಪೇಟೆಯಲ್ಲಿಯೇ ವಾಸವಿರುತ್ತಾರೆ. ಸದರಿಯವರು ಆರೋಗ್ಯದಿಂದ ಇದ್ದಾರೆ ಅಂದರೆ ಸರಿ. ಅವರು ಪ್ರತಿದಿನ ಶಾಲೆಗೆ ಹೋಗಿಬರುತ್ತಾರೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಗಾದಿಗನೂರಿನ ಶಾಲೆಗೆ ಹೋಗಿ ಬರುತ್ತಾರೆ ಎಂದು ನುಡಿಯುತ್ತಾರೆ. ಮನೆಯಲ್ಲಿ ಯಾವುದೇ ಕಾರ್ಯಕ್ರಮಗಳು, ಹಬ್ಬ ಹರಿದಿನಗಳಿದ್ದಾಗ ನನ್ನ ಅಕ್ಕ ರಜೆ ಹಾಕರುತ್ತಾರೆ ಅಂದರೆ ಸರಿ. ಸದರಿಯವರು ವಿದ್ಯಾವಂತರು ಅಂದರೆ ಸರಿ. ಅವರಿಗೆ ವ್ಯವಹಾರಿಕ ಜ್ಞಾನ ಇದೆ ಅಂದರೆ ಸರಿಯಲ್ಲ. ಅವರಿಗೆ ಸ್ವತ್ತು ಖರೀದಿಸುವಂತಹ ವ್ಯವಹಾರಿಕ ಜ್ಞಾನ ಇರುವುದಿಲ್ಲ.

ನಾನು ಬಿ.ಎಸ್.ಸಿ ಪದವೀಧರನಿರುತ್ತೇನೆ. ಪ್ರಕರಣದಲ್ಲಿನ ಚೆಕ್ ಸಾಲದ ವ್ಯವಹಾರಕ್ಕೆ ಸಂಬಂಧಿಸಿದ್ದಲ್ಲ ಅಂದರೆ ಸರಿ. ನನ್ನ ಅಕ್ಕ ಆರೋಪಿಗೆ ನೀಡಿದ್ದ ನೋಟಿಸ್‌ಗೆ ಆತನ ಉತ್ತರ ನೀಡಿರುತ್ತಾನೆ ಅಂದರೆ ಸರಿ.

ಪಾಟೀಸವಾಲಿಗಾಗಿ ಸಮಯ ಕೋರಿದ್ದು, ಮುಂದುಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.